# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572103 ☎:0816-2255650,2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪವಿ:2024-25 : 766 ದಿನಾಂಕ:16.12.2024

## : ಸುತ್ತೋಲೆ :

ವಿಷಯ : ಸ್ನಾತಕ ಪದವಿಯ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ್ದರ ಬಗ್ಗೆ.

ಉಲ್ಲೇಖ : ಈ ಕಚೇರಿ ಅಧಿಸೂಚನೆ ಸಂಖ್ಯೆ:ತುವಿ:ಪವಿ:2024-25/759 ದಿನಾಂಕ:10.12.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25 ನೇ ಶೈಕ್ಷಣಿಕ ಸಾಲಿನ 2025 ರ ಜನವರಿ/ಫೆಬ್ರವರಿ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ UUCMS ತಂತ್ರಾಂಶದ ಮೂಲಕ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ (ನವೀನ & ಪೂರಕ) ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳಲು ಈಗಾಗಲೇ ಉಲ್ಲೇಖದನ್ವಯ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಆದರೆ, ತಾಂತ್ರಿಕ ಕಾರಣಗಳಿಂದಾಗಿ UUCMS ತಂತ್ರಾಂಶದ ಮೂಲಕ ಈ ಕೆಳಕಂಡ ಶುಲ್ಕವನ್ನು ಪಾವತಿಸಲು ಸಾಧ್ಯವಾಗದ ಕಾರಣ, **ಎಲ್ಲಾ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್‌ನ ಪೂರಕ ವಿದ್ಯಾರ್ಥಿಗಳಿಂದ ಪ್ರತಿ ಸೆಮಿಸ್ಟರ್‌ಗೆ "ಪರೀಕ್ಷಾ ಸಿದ್ಧತಾ ಶುಲ್ಕ" ರೂ. 35-00/- (ಮೂವತ್ತೈದು ರೂಪಾಯಿಗಳು ಮಾತ್ರ) ಗಳನ್ನು ಬಾಹ್ಯವಾಗಿ ಸ್ವೀಕರಿಸಿ ದಿನಾಂಕ:09.01.2025 ರೊಳಗೆ "ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು"** ಇವರ ಖಾತೆಗೆ NEFT/RTGS ಮುಖಾಂತರ ಪಾವತಿಸಿ, ಸಂಬಂಧಿಸಿದ ದಾಖಲೆ ಹಾಗೂ ವಿವರಗಳೊಂದಿಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ತಮಗೆ ತಿಳಿಸಲಾಗಿದೆ. ಇನ್ನುಳಿದಂತೆ ಉಲ್ಲೇಖಿತ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

| ಕ್ರಮ ಸಂಖ್ಯೆ | ಇತರೆ ಶುಲ್ಕಗಳ ವಿವರ | ಮೊತ್ತ (ರೂ. ಗಳಲ್ಲಿ) |
|---|---|---|
| 1. | "ಪರೀಕ್ಷಾ ಸಿದ್ಧತಾ ಶುಲ್ಕ" (ಪ್ರತಿ ಸೆಮಿಸ್ಟರ್‌ಗೆ)<br>**(ಒಂದು, ಮೂರು ಮತ್ತು ಐದನೇ ಸೆಮಿಸ್ಟರ್‌ನ ಪೂರಕ ವಿದ್ಯಾರ್ಥಿಗಳಿಂದ ಮಾತ್ರ ಕಡ್ಡಾಯವಾಗಿ ಪಾವತಿಸಿಕೊಳ್ಳುವುದು)** | 35-00 |

16/12/24.

**ಕುಲಸಚಿವರು (ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರುಗಳು, ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರತಿಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.